ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 34-39
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ಪದ್ಧತಿ: ಒಂದು ಅಧ್ಯಯನ

**ಪ್ರದೀಪ್ ಕುಮಾರ್ ಎಂ**
ಅತಿಥಿ ಉಪನ್ಯಾಸಕರು, ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಮನಗರ, ಬೆಂಗಳೂರು ವಿಶ್ವವಿದ್ಯಾಲಯ, ರಾಮನಗರ.

**Abstract:**
*ಬುಡಕಟ್ಟು ಜನರು ಸಾಮಾನ್ಯವಾಗಿ ಅನಾದಿಕಾಲದಿಂದಲೂ ಅರಣ್ಯ ಗುಡ್ಡಗಾಡು ಪರ್ವತಗಳ ನಡುವೆ ಬದುಕುತ್ತಿದ್ದಾರೆ. ಕಾಡನ್ನು ಉಸಿರಾಗಿಸಿಕೊಂಡಿರುವ ಬುಡಕಟ್ಟು ಸಮುದಾಯಗಳನ್ನು ಅಧ್ಯಯನಕಾರರು ಆದಿವಾಸಿಗಳು, ಮೂಲನಿವಾಸಿಗಳು, ಆದಿಮ ಬುಡಕಟ್ಟು, ಗಿರಿಜನ, ವನವಾಸಿ ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ. ಕರ್ನಾಟಕದ ಬುಡಕಟ್ಟು ಸಮುದಾಯಗಳಲ್ಲಿ ಸೋಲಿಗರು ಅತ್ಯಂತ ಪ್ರಮುಖವಾದ ಸಮುದಾಯವಾಗಿದೆ. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯ ಸೋಲಿಗ ಸಮುದಾಯದವರ ಸಾಮಾಜಿಕ ಸಾಂಸ್ಕೃತಿಕ ಜೀವನ ಕುರಿತು ಅಧ್ಯಯನ ಮಾಡಲಾಗಿದೆ. ಸೋಲಿಗ ಸಮುದಾಯದ ಆರ್ಥಿಕ ಜೀವನ, ಜನನ ಸಂಸ್ಕಾರ, ವಿವಾಹ ಪದ್ಧತಿ, ಧಾರ್ಮಿಕ ಜೀವನ, ಮರಣ ಸಂಸ್ಕಾರ, ನ್ಯಾಯ ಪದ್ಧತಿ, ಭಾಷೆ ಮತ್ತು ಶಿಕ್ಷಣ, ಸಾಮಾಜಿಕ ಜೀವನ ಮುಂತಾದ ವಿಚಾರಗಳನ್ನು ಈ ಲೇಖನದಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ.*

**Keywords:** *ಬುಡಕಟ್ಟು ಸಮುದಾಯ, ಸೋಲಿಗರು, ಪರಿಶಿಷ್ಟ ಬುಡಕಟ್ಟು, ಬಿಳಿಗಿರಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ, ಬಂಡೀಪುರ ಅಭಯಾರಣ್ಯ.*

## ಪೀಠಿಕೆ

ಪ್ರಸ್ತುತ 2011 ನೇ ಜನಗಣತಿ ಪ್ರಕಾರ ಭಾರತದಲ್ಲಿ 705ಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳು ನೆಲೆಸಿವೆ. ಒಟ್ಟು ಜನಸಂಖ್ಯೆಯಲ್ಲಿ ಶೇ.8.6 ರಷ್ಟಿರುವ ಬುಡಕಟ್ಟು ಜನರು ದೇಶದ ಬಹುತೇಕ ರಾಜ್ಯಗಳಲ್ಲಿ ಹಂಚಿ ಹೋಗಿದ್ದಾರೆ. ಕರ್ನಾಟದಲ್ಲಿ ಸೋಲಿಗ, ಬೆಟ್ಟಕುರುಬ, ಜೇನುಕುರುಬ, ಯರವ, ಸಿದ್ದಿ, ಹಕ್ಕಿಪಿಕ್ಕಿ, ಮೇದಾರ, ಕೊರಗ ಬುಡಕಟ್ಟು ಸಮುದಾಯಗಳು ಸೇರಿದಂತೆ ಒಟ್ಟು 50 ಬುಡಕಟ್ಟು ಸಮುದಾಯಗಳು ಕರ್ನಾಟಕದಲ್ಲಿ ನೆಲೆಗೊಂಡಿವೆ. ಈ ಬುಡಕಟ್ಟುಗಳು ವಿಭಿನ್ನ ಸಂಸ್ಕೃತಿಯನ್ನು ಹೊಂದಿದ್ದಾರೆ.

ಸೋಲಿಗರು ಹೆಚ್ಚಾಗಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಹುಣಸೂರು, ಚಾಮರಾಜನಗರ ಜಿಲ್ಲೆಯ ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ ತಾಲೂಕುಗಳಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಕಂಡುಬರುತ್ತಾರೆ. ಸೋಲಿಗ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಶೇ.80 ರಷ್ಟು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿಯೇ ನೆಲೆಸಿದ್ದಾರೆ.

**Please cite this article as:** ಪ್ರದೀಪ್ ಕುಮಾರ್ ಎಂ. (2024). ಸೋಲಿಗ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ ಪದ್ಧತಿ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 34–39

2011ರ ಜನಗಣತಿಯ ಪ್ರಕಾರ ಸೋಲಿಗರ ಒಟ್ಟು ಜನಸಂಖ್ಯೆ 46,268 ಇದ್ದು, ಮುಖ್ಯ ಕಸುಬು ಕೂಲಿ ಮತ್ತು ವ್ಯವಸಾಯವಾಗಿದೆ.

**ಸೋಲಿಗರ ಐತಿಹ್ಯ**

ಸೋಲಿಗ ಸಮುದಾಯದ ಉಗಮದ ಬಗ್ಗೆ ಅನೇಕ ಐತಿಹ್ಯ ಮತ್ತು ಪೌರಾಣಿಕ ಕಥೆಗಳಿವೆ. ಐತಿಹ್ಯವೊಂದರ ಪ್ರಕಾರ ಸೋಲಿಗ ಎಂಬ ಹೆಸರು ಬರಲು ಕಥೆಯೊಂದಿದೆ ಒಮ್ಮೆ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಗೊಂಬೆಗಳನ್ನು ಮಾಡಿ ಅವಕ್ಕೆ ಜೀವ ತುಂಬಿದರು. ಒಂದು ನೀಲಯ್ಯನಾಯಿತು. ಇನ್ನೊಂದು ಸಂಕಮ್ಮಳಾಯಿತು. ಮುಂದೆ ವಂಶ ಇವರಿಂದ ಬೆಳೆಯಿತು. ಈ ಮಕ್ಕಳು ಸೋಲನ ಹಂಬಿನ ಗೆಡ್ಡೆಯನ್ನು ತಿಂದು ಜೀವಿಸುತ್ತಿದ್ದರು. ಹೀಗೆಯೇ ಅವರು ಗೆಡ್ಡೆಯನ್ನು ಕಿತ್ತು ಬೇಯಿಸುತ್ತಾ ತಿನ್ನುತ್ತಲೇ ಮುಪ್ಪಾದರು. ಆದರೆ ಸೋಲಿನ ಹಂಬು ಮಾತ್ರ ಮತ್ತೆ ಮತ್ತೆ ಚಿಗುರಿ ಹೊಸ ಹೊಸ ಗೆಡ್ಡೆ ಬಿಟ್ಟಿತು. ಈ ಮುದುಕ ಗೆಡ್ಡೆ ಕೀಳಲು ಬಂದಾಗ ಆ ಸೋಲನ ಹಂಬು ನಿನ್ನ ಕೈಯಿಂದ ನನ್ನ ಗೆಡ್ಡೆಯನ್ನು ಸಾಯೋವರೆಗೂ ಕಿತ್ತರೂ ನನ್ನನ್ನು ಸೋಲಿಸುವುದಕ್ಕೆ ಆಗಲ್ಲ, ಆದ್ದರಿಂದ ನನ್ನ ಗೆಡ್ಡೆ ಕಿತ್ತು ಸೋತವನು ನೀನು ಸೋಲಿಗ ಎಂದು ಹೇಳಿತು. ಅಂದಿನಿಂದ ಸೋಲಿಗರಿಗೆ ಸೋಲಿಗರು ಎಂಬ ಹೆಸರು ಬಂದಿತು. ಹೀಗೆ ಸೋಲಿಗರಲ್ಲಿ ಹಲವಾರು ಐತಿಹ್ಯಗಳಿವೆ.

**ಸೋಲಿಗರ ಪಂಗಡಗಳು**

ಎಚ್.ವಿ. ನಂಜುಂಡಯ್ಯ ಮತ್ತು ಎಲ್.ಕೆ. ಅನಂತಕೃಷ್ಣ ಅಯ್ಯರ್ (1930) ಅವರು ಸೋಲಿಗರ ಪಂಗಡಗಳ ಬಗ್ಗೆ ಹೀಗೆ ಬರೆಯುತ್ತಾರೆ. ಸೋಲಿಗರಲ್ಲಿ ಊರಳಿ ಸೋಲಿಗರು, ಮಲೆ ಸೋಲಿಗರು, ಕಾಡು ಸೋಲಿಗರು, ಊರುಬತ್ತಿ ಸೋಲಿಗರು, ಬುರುಡೆ ಸೋಲಿಗರು ಎಂಬ ವಿವಿಧ ಒಳಗುಂಪುಗಳಿವೆ ಇವರು ಬಿಳಿಗಿರಿರಂಗನ ಬೆಟ್ಟ, ಮಲೈ ಮಹದೇಶ್ವರ ಬೆಟ್ಟದ ಸುತ್ತಲಿನಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ ಎಂದು ಹೇಳಿದ್ದಾರೆ. ಪ್ರಸ್ತುತ ಸೋಲಿಗರಲ್ಲಿ ಎರಡು ಪಂಗಡಗಳಿವೆ. ಅವುಗಳೆಂದರೆ ಐದು ಕುಲದ ಸೋಲಿಗ ಮತ್ತು ಏಳುಕುಲದ ಸೋಲಿಗ.

**ಸೋಲಿಗರ ಕುಲಗಳು**

ಐದು ಕುಲದ ಸೋಲಿಗರಲ್ಲಿ ಹೊಂಗೆಲರ ಕುಲ, ಆಲರ ಕುಲ, ಬೆಲ್ಲರ ಕುಲ, ಸೂರ್ಯನ ಕುಲ ಮತ್ತು ತನೇರು ಕುಲ ಎಂಬ ಕುಲಗಳಿವೆ.

***ಹೊಂಗೆಲರ ಕುಲ:*** ಇವರ ಕುಲದೇವತೆ ಹೊಂಗೆಯ ಮರ. ಒಮ್ಮೆ ಈ ಗುಂಪಿನ ಸೋಲಿಗರು ಹೊಂಗೆಯ ಮರವನ್ನು ಒಂದು ಬಂಡೆಯ ಹತ್ತಿರ ಕಡಿಯುತ್ತಿದ್ದಾಗ ದೇವರು ಇರುವುದರ ಅರಿವಾಯಿತು. ಅಂದಿನಿಂದ ಹೊಂಗೆಯ ಮರವನ್ನು ಕಡಿಯುವುದನ್ನು ಮತ್ತು ಅದನ್ನು ಒಲೆಗೆ ಹಾಕುವುದನ್ನು ನಿಲ್ಲಿಸಿದರು.

***ಆಲರ ಕುಲ:*** ಇವರ ಕುಲದೇವತೆ ಮಹದೇಶ್ವರ ಹಾಗೆಯೇ ಬಿಳಿಗಿರಿರಂಗ ಬೆಟ್ಟದ ಹತ್ತಿರದಲ್ಲಿರುವ ಕ್ಯಾತೆ ದೇವರು ಈ ಕುಲದ ದೇವತೆಯಾಗಿದೆ.

***ಬೆಲ್ಲರ ಕುಲ:*** ಇದನ್ನು ಬೆಳ್ಳಿಕುಲ ಎಂದು ಕರೆಯುತ್ತಾರೆ. ಪಂದೇಶ್ವರ ಎಂಬ ದೇವರು ದೇವರ ಬೆಟ್ಟದಲ್ಲಿ ನೆಲೆಸಿರುವ ದೇವತೆ ಇವರ ಕುಲದೇವತೆ. ಈ ದೇವರ ಬೆಟ್ಟವು ಕೊಯಮತ್ತೂರು ಜಿಲ್ಲೆಯ ಭವನಂ ತಾಲೂಕಿನಲ್ಲಿದೆ. ಪಂದೇಶ್ವರ ದೇವತೆಯು ಸೋಲಿಗರನ್ನು ಅವರ ಕುಲದ ಬಗೆಗೆ ವಿಚಾರಿಸುತ್ತಿದ್ದಾಗ, ನಾಡಿನ ಆಚಾರಿಗಳು, ಚಿನ್ನ, ಬೆಳ್ಳಿ ಕೆಲಸದಲ್ಲಿ ತೊಡಗಿದ್ದರು. ಆದುದರಿಂದ ಇವರಿಗೆ ಬೆಳ್ಳಿಕುಲ ಎಂದು ಹೆಸರಾಯಿತು.

***ಸೂರ್ಯನ ಕುಲ:*** ಇವರ ಕುಲದೇವತೆ ಬರಮಸ್ವಾಮಿ, ಈ ದೇವತೆಯ ದೇವಸ್ಥಾನ ಕೊಳ್ಳೇಗಾಲದ ತಾಲೂಕಿನ ಮಾರ್ಟಳ್ಳಿಯಲ್ಲಿದೆ. ಈ ಸುತ್ತಿನ ಜನರು ಕೈಯಲ್ಲಿ ಚೂರಿ ಹಿಡಿದಿದ್ದರಿಂದ ಸೋಲಿಗರು ಆ ಹೆಸರು ಬಂತು ಎಂಬ ನಂಬಿಕೆ ಇದ್ದರೆ, ಬಿಳಿಗಿರಿರಂಗನ ಬೆಟ್ಟದ ಸುತ್ತಲಿನಲ್ಲಿ ಈ ಕುಲದೇವತೆ ಶೂರರು ಎಂದಿದೆ.

**ತನೇರು ಕುಲ:** ಮಹದೇಶ್ವರ ಇವರ ಮಹದೇಶ್ವರರು ಕೆಲವು ಸೋಲಿಗರ ಕುಲದ ವಿಷಯ ವಿಚಾರಿಸುತ್ತಿದ್ದಾಗ, ಅವರು ರಾಗಿಯ ಹೊರೆಯನ್ನು ತಲೆಯ ಮೇಲೆ ಹೊತ್ತಿದ್ದರು. ಆದುದರಿಂದ ಇವರಿಗೆ ತೆನೇರು ಕುಲ ಎಂದು ಹೆಸರಾಯಿತು.

ಇದರ ಜೊತೆಯಾಗಿ 6) ಜೇನುಕುಲ ಮತ್ತು 7) ಕುಂಬಳ ಕುಲಗಳು ಈ ಎರಡು ಕುಲಗಳನ್ನು ಸೇರಿಸಿಕೊಳ್ಳಲಾಗಿದೆ.

**ಸೋಲಿಗರ ಜೀವನಾವರ್ತಕ ಆಚರಣೆಗಳು**

ಸೋಲಿಗ ಸಮುದಾಯದ ಜೀವನಾವರ್ತನ ಆಚರಣೆಗೆ ಇತರೆ ಸಮುದಾಯದ ಆಚರಣೆಗಳಿಗಿಂತ ಭಿನ್ನವಾಗಿದೆ.

***ಜನನ ಮತ್ತು ನಾಮಕರಣ ಪದ್ಧತಿ***

ಸೋಲಿಗರಲ್ಲಿ ಹುಟ್ಟು ಸೂತಕದ ಪ್ರತೀಕ ಎಂಬ ಭಾವನೆ ಇದೆ. ಬಾಣಂತಿಯ ಸಹಾಯಕ್ಕೆ ತಾಯಿ ಅಥವಾ ಹಿರಿಯ ಹೆಂಗಸು ಇರುತ್ತಾರೆ. ಇವರ ಹೆರಿಗೆಯನ್ನು ತಮ್ಮ ಸಾಂಪ್ರದಾಯಿಕ ಪದ್ಧತಿಯಂತೆ ಮಾಡುತ್ತಾರೆ. ಸೋಲಿಗರು ಹೆರಿಗೆಯ ಸಂದರ್ಭದಲ್ಲಿ ಆಕೆಯನ್ನು ಕೂರಿಸಿ ಹೆರಿಗೆ ಮಾಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ಯಾವ ಶಸ್ತ್ರಚಿಕಿತ್ಸೆಯ ಉಪಕರಣಗಳನ್ನು ಬಳಸುವುದಿಲ್ಲ. ಸೋಲಿಗರಲ್ಲಿ ಮಗು ಜನಿಸಿದ ಒಂಭತನೇ ದಿನಕ್ಕೆ ಮನೆಯನ್ನು ಶುದ್ಧಿಗೊಳಿಸಿ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸಿ ಸೂತಕವನ್ನು ಕಳೆಯುತ್ತಾರೆ. ಅದೇ ದಿನ ಮಗುವಿಗೆ ನಾಮಕರಣ ಅಥವಾ ಹೆಸರು ಕರೆಯುತ್ತಾರೆ. ಮಗುವಿಗೆ ಹೆಸರನ್ನು ಕರೆಯಬೇಕಾದರೆ ಅವರ ಮನೆಯ ದೇವರ ಹೆಸರು, ತಾತ, ಅಜ್ಜಿಯ ಹೆಸರನ್ನು ಕೂಡ ಕರೆಯುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಳ್ಳಲು ಆದ್ಯತೆ ಕೊಡುತ್ತಾರೆ.

***ಪ್ರೌಢಾವಸ್ಥೆ***

ಸೋಲಿಗರಲ್ಲಿ ಹುಡುಗಿಯ ಮೈನೆರೆದಾಗ ಅವಳ ಸೋದರಮಾವ ಬಂದು ಗುಡಿಸಲಿನ ಪಕ್ಕದಲ್ಲಿಯೇ ಒಂಬತ್ತು ಜಾತಿಯ ಸೊಪ್ಪುಗಳಾದ ಹಲಸು, ಮಾವು, ಹೊಂಗೆ, ಬೇವು, ಬಸುರಿ, ತೆಂಗು, ಆಲ, ತೇಗ, ಮುತ್ತುಗದ ಸೊಪ್ಪುಗಳಿಂದ ಗುಡಿಸಲನ್ನು ನಿರ್ಮಿಸಿ, ಅವಳನ್ನು ಅಲ್ಲಿರಿಸುತ್ತಾರೆ. ಅಂದಿನಿಂದ 6 ದಿನಗಳವರೆಗೆ ಏಕಾಂತ ವಾಸದಲ್ಲಿಡುತ್ತಾರೆ. ಅವಳಿಗೆ ಸಹಾಯಕರಾಗಿ ಒಬ್ಬ ಹುಡುಗಿಯನ್ನು ಬಿಟ್ಟಿರುತ್ತಾರೆ. ಮತ್ಯಾರೂ ಇರಕೂಡದು, ಮಾತನಾಡಕೂಡದು, ಯಾರಿಗೂ ಅವಳ ಸಂಪರ್ಕವಿರುವುದಿಲ್ಲ. ಆಮೇಲೆ 9ನೇ ದಿನಕ್ಕೆ ಅವಳ ಸೋದರಮಾವ ಹೊಸಬಟ್ಟೆ, ಎಲೆ ಅಡಿಕೆ ತಂದುಕೊಡುತ್ತಾನೆ. ಅವಳಿಗೆ ಸ್ನಾನ ಮಾಡಿಸಿ ಹೊಸಬಟ್ಟೆ ಹಾಕಿ ಶಾಸ್ತ್ರ ಮಾಡುತ್ತಾರೆ. ಅಂದಿನಿಂದ ಅವಳು ಶುದ್ಧಳಾಗುತ್ತಾಳೆ.

***ವಿವಾಹ ಪದ್ಧತಿ***

ಸೋಲಿಗರ ವಿವಾಹ ತುಂಬಾ ಸರಳ ವಿವಾಹವಾಗಿದೆ. ಅವರ ಸಂಪ್ರದಾಯದ ಮದುವೆಗೆ ತಗಲುವ ವೆಚ್ಚ ದುಬಾರಿಯಾದುದರಿಂದಲೂ, ಅವರು ಆರ್ಥಿಕವಾಗಿ ಹಿಂದುಳಿದಿರುವುದರಿಂದಲೂ ಈ ರೀತಿಯ ವಿವಾಹ ಪದ್ಧತಿಯನ್ನು ರೂಢಿಸಿಕೊಳ್ಳುವುದು ಅವರಿಗೆ ಅನಿವಾರ್ಯವಾಯಿತು. ಸೋಲಿಗರಲ್ಲಿ ಅಪಹರಣ ವಿವಾಹ, ಸೇವಾ ವಿವಾಹ, ಬಹುಪತ್ನಿತ್ವ ವಿವಾಹ, ಮೈದುನ ವಿವಾಹ, ಏಕಸಂಗಾತಿ ವಿವಾಹ, ವಿಧವಾ ವಿವಾಹದ ಪದ್ಧತಿಗಳು ಹೆಚ್ಚು ಬಳಕೆಯಲ್ಲಿವೆ.

ಗೆಡ್ಡೆ ಗೆಣಸು ಕೀಳುವ ಸಲುವಾಗಿ ಗಂಡು ಹೆಣ್ಣು ಬೇಧವಿಲ್ಲದೆ ಕಾಡಿನಲ್ಲಿ ಅಲೆಯುತ್ತಾರೆ. ಇಂತಹ ಸಂದರ್ಭದಲ್ಲಿ ಇಲ್ಲಿ ಗಂಡು ಒಂದು ಹೆಣ್ಣಿನ ಜೊತೆಯಲ್ಲಾಗಲಿ, ಒಂದು ಹೆಣ್ಣು ಗಂಡಿನ ಜೊತೆಯಲ್ಲಾಗಲಿ ಸಲಿಗೆ ಬೆಳೆಸಲು ಅವಕಾಶವಿರುತ್ತದೆ. ಈ ಬಗೆಯ ಕಾಡಿನ ವಾತಾವರಣದಲ್ಲಿ ಗಂಡು ಹೆಣ್ಣು ಒಂದು ಸ್ಥಳದಲ್ಲಿ ಕುಳಿತು ಮಾತಾಡಬಲ್ಲರು. ಪರಸ್ಪರ ಅರ್ಥ ಮಾಡಿಕೊಳ್ಳಬಲ್ಲರು. ಇದೇ ಸಂದರ್ಭದಲ್ಲಿಯೇ ಪರಸ್ಪರರ ಪ್ರೇಮ ಅಂಕುರಿಸಿ ಕಾಡಿಗೆ ಓಡಿಹೋಗುತ್ತಾರೆ. ನಂತರ ಒಂದು ವಾರ ಬಿಟ್ಟು ಹಾಡಿಗೆ ವಾಪಸ್ಸು ಬರುತ್ತಾರೆ. ಅವರಿಬ್ಬರು ಹಾಡಿಗೆ

ಮರಳಿದ ಮೇಲೆ ಪಂಚಾಯಿತಿ ಸೇರುತ್ತದೆ. ಹಾಡಿಯ ಹಿರಿಯರ ಅಪ್ಪಣೆ ಇಲ್ಲದೇ ಓಡಿ ಹೋಗಿದ್ದ ಗಂಡು ಹೆಣ್ಣುಗಳಿಗೆ ದಂಡ ವಿಧಿಸಲಾಗುತ್ತದೆ. ಅದಲ್ಲದೆ ಹಿರಿಯರಿಗೆ ಒಂದು ಭೋಜನ ಕೂಟವನ್ನು ಸಹ ಏರ್ಪಡಿಸಬೇಕು. ಅನಂತರದಲ್ಲಿ ಅವರಿಬ್ಬರೂ ಗಂಡ ಹೆಂಡತಿಯರೆಂದು ಹಾಡಿಯವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಈಗ ಈ ಪದ್ಧತಿ ಕಡಿಮೆಯಾಗುತ್ತಿದ್ದು, ನಿಶ್ಚಿತವಾದ ಮದುವೆಗಳು ನಡೆಯುತ್ತಿವೆ. ವಿವಾಹ ವಿಚ್ಛೇದನಗಳಿಗೆ ಅವಕಾಶವಿದ್ದು, ಮರುವಿವಾಹ ಅಥವಾ ವಿಧವಾ ವಿವಾಹಗಳು, ಕೂಡಾವಳಿ ವ್ಯವಸ್ಥೆಯೂ ಕಂಡುಬರುತ್ತದೆ.

***ಮರಣ ಸಂಸ್ಕಾರ***

ಸೋಲಿಗ ಸಮುದಾಯದಲ್ಲಿ ವ್ಯಕ್ತಿ ಮೃತಪಟ್ಟಾಗ ಮೊದಲು ಹಾಡಿಯ ಯಜಮಾನರಿಗೆ ತಿಳಿಸುತ್ತಾರೆ. ನಂತರ ಹಾಡಿಯ ಯಜಮಾನ ಮುಂದೆ ನಿಂತು ಎಲ್ಲಾ ಕಾರ್ಯವನ್ನು ನೆರವೇರಿಸುತ್ತಾನೆ. ಸೋಲಿಗರಲ್ಲಿ ಸತ್ತವನ್ನು ಹೂಳುವ ಪದ್ಧತಿಯಿದೆ. ನೆಂಟರಿಷ್ಟರು, ಬಂಧು-ಬಳಗದವರು ಎಲ್ಲರೂ ಸೇರಿದ ಮೇಲೆ ಹೆಣಕ್ಕೆ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸಿ ಪೂಜೆ ಮಾಡುತ್ತಾರೆ. ಗಂಡ ಸತ್ತಾಗ ಹೆಂಡತಿಗೂ ಸ್ನಾನ ಮಾಡಿಸಿ ಹೊಸಬಟ್ಟೆ ತೊಡಿಸಿ ಗಂಡನ ಪಕ್ಕದಲ್ಲಿ ಕೂರಿಸಿ ಮಡಿಲು ಅಕ್ಕಿ ತುಂಬುತ್ತಾರೆ. ಹೀಗೆ ವಿವಿಧ ಶಾಸ್ತ್ರಗಳು ಮುಗಿದ ನಂತರ ಹೆಣವನ್ನು ಚಟ್ಟದ ಮೇಲೆ ಮಲಗಿಸಿ ಸ್ಮಶಾನಕ್ಕೆ ಅಥವಾ ಜಮೀನಿಗೆ ತೆಗೆದುಕೊಂಡು ಹೋಗಿ ಹೂಳುತ್ತಾರೆ. ಹೂಳುವಾಗ ಶವದ ತಲೆಯನ್ನು ಉತ್ತರದ ಕಡೆಗೂ, ಕಾಲುಗಳನ್ನು ದಕ್ಷಿಣದ ಕಡೆಗೂ ಮಾಡಿ ಹೂಳುತ್ತಾರೆ. ತೊನ್ನು ಬಂದವರನ್ನು ಮತ್ತು ಆತ್ಮಹತ್ಯೆ ಮಾಡಿಕೊಂಡವರನ್ನು ಸುಡುವ ಪದ್ಧತಿ ರೂಢಿಯಲ್ಲಿದೆ. ಹನ್ನೆರಡನೇ ದಿನಕ್ಕೆ ತಿಥಿ ಕಾರ್ಯವನ್ನು ಮಾಡುತ್ತಾರೆ.

ಪ್ರಸ್ತುತ ಘಟ್ಟದಲ್ಲಿ, ಸೋಲಿಗರ ಅಭಿವೃದ್ಧಿಗೆ ಸರ್ಕಾರಗಳು, ಸರ್ಕಾರೇತರ ಸಂಘ ಸಂಸ್ಥೆಗಳು ನಿರಂತರವಾಗಿ ಹಲವಾರು ಕಾರ್ಯಕ್ರಮಗಳನ್ನು ನೀಡುವುದರ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು ಶ್ರಮಿಸುತ್ತಿದ್ದಾರೆ. ಹತ್ತಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದರೂ ಸಹ ಅವರು ಸಮಾಜದ ಮುಖ್ಯವಾಹಿನಿಗೆ ಬಹು ದೂರವುಳಿದಿರುವಂತೆ ಭಾಸವಾಗುತ್ತಿದೆ. ಈಗಿನ ವಾತಾವರಣದಲ್ಲಿ ಸೋಲಿಗ ಜನಾಂಗದವರು ಸಮಾಜದ ಮುಖ್ಯವಾಹಿನಿಗೆ ಮರಳುತ್ತಿದ್ದು ಮತ್ತಷ್ಟು ಕಾರ್ಯಕ್ರಮಗಳು ಅವಶ್ಯಕವಾಗಿ ಜಾರಿಯಾಗಬೇಕಿವೆ. ಅವರ ಸಾಮಾಜಿಕ ಜೀವನ ವೃದ್ಧಿಸಬೇಕಿದೆ. ಸೋಲಿಗ ಜನಾಂಗದ ಯುವಜನತೆ ಸಮಾಜದ ಮುಖ್ಯವಾಹಿನಿಗೆ ಬಂದು ಉತ್ತಮ ವಿದ್ಯಾಭ್ಯಾಸವನ್ನು ಪಡೆದು ಉತ್ತಮ ಪ್ರಜೆಗಳಾಗಿ ರೂಪುಗೊಳಿಸಲು ಹಲವಾರು ಯೋಜನೆಗಳು ಅವಶ್ಯಕವೆನಿಸಿವೆ.

**ಸಾಮಾಜಿಕ ಜೀವನ**

ಸೋಲಿಗರು ತಮ್ಮವರಿಗಿಂತ ಉತ್ತಮ ಜನಾಂಗದಲ್ಲಿ ಊಟ ಮಾಡುವರು. ಆದರೆ ಇವರಿಗಿಂತ ಕೀಳುಜಾತಿಗಳಲ್ಲಿ ಊಟವನ್ನು ಮಾಡುವುದಿಲ್ಲ. ಸಾಮಾನ್ಯವಾಗಿ ಇವರ ಮನೆಗಳು ಹಕ್ಕಿಗೂಡಿನಂತಹ ಸಣ್ಣ ಗುಡಿಸಲಿನಿಂದ ಕೂಡಿದ್ದು, ಮನೆಯವರೆಲ್ಲಾ ಒಳಗಡೆ ಮಲಗದೆ ಗುಡಿಸಲಿನ ಮುಂಭಾಗದಲ್ಲಿ ನಿರಂತರವಾಗಿ ಬೆಂಕಿ ಹಾಕಿಕೊಂಡು ಅದರ ಸುತ್ತಲೂ ಮಲಗುತ್ತಾರೆ. ಆದರೆ ಇತ್ತೀಚೆಗೆ ಸರ್ಕಾರದಿಂದ ವಸತಿ ಸೌಲಭ್ಯ ದೊರೆತಿದೆ. ಹಬ್ಬಹರಿದಿನಗಳಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಹುಡುಗರು, ಹುಡುಗಿಯರು ಎಲ್ಲರು ಸೇರಿ ಅದರಲ್ಲಿರುವ ತಮಟೆ, ಮದ್ದಳೆ, ಕೊಳಲು, ಓಲಗದಂತಹ ವಾದ್ಯವನ್ನು ಬಾರಿಸುತ್ತಾ ಕುಣಿಯುತ್ತಾರೆ.

**ಧಾರ್ಮಿಕ ಜೀವನ**

ಸೋಲಿಗರು ಪೂಜಿಸುವ ಅನೇಕ ದೇವರುಗಳಲಿ ಅವರು ಮುಖ್ಯವಾದ ಆರಾಧ್ಯ ದೇವರು, ಮಹದೇಶ್ವರ, ಬಿಳಿಗಿರಿರಂಗಸ್ವಾಮಿ, ಇನ್ನಿತರ ದೇವರುಗಳಾದ ತೆಳ್ಳೂರಮ್ಮ, ಕಬ್ಬಾಳಮ್ಮ,

ಭೈರವೇಶ್ವರ, ಏಳಮುಖದ ಮಾರಿ, ಬೆಟ್ಟಾಳಪ್ಪ, ಚಿಕ್ಕಮ್ಮ ಮುಂತಾದ ದೇವರುಗಳನ್ನು ಪೂಜಿಸುತ್ತಾರೆ. ಮಹದೇಶ್ವರ ಅನೇಕರ ಮನೆ ದೇವರು ಆಗಿದ್ದು, ಇವರಲ್ಲಿ ದೇವರ ಬಗ್ಗೆ ಅಪಾರವಾದ ಭಯ ಭಕ್ತಿ ಇದೆ. ಇದಲ್ಲದೆ ಚಂದ್ರಮಾನ ಯುಗಾಗಿ, ಮಕರ ಸಂಕ್ರಾಂತಿ, ಗೌರಿ ಗಣೇಶ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

**ಭಾಷೆ ಮತ್ತು ಶಿಕ್ಷಣ**

ಈ ಪ್ರದೇಶದಲ್ಲಿ ವಾಸಿಸುವ ಸೋಲಿಗರಿಗೆ ಅವರದೇ ಆದ ಭಾಷೆ ಇಲ್ಲ. ಮೂಲತಃ ಕನ್ನಡ ಭಾಷೆಯನ್ನು ಬಿಟ್ಟರೆ ಬೇರೆ ಯಾವ ಭಾಷೆಯು ಅವರಿಗೆ ಬರುವುದಿಲ್ಲ. ಶಿಕ್ಷಣವನ್ನು ಅವರ ಮಕ್ಕಳಿಗೆ ಕನ್ನಡ ಭಾಷೆಯಲ್ಲಿ ಕೊಡಿಸುತ್ತಾರೆ. ಇವರಲ್ಲಿ ಶಿಕ್ಷಣ ಪಡೆದಿರುವವರು ಬಹಳ ಕಡಿಮೆ. ಆದ್ದರಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳು, ಆಶ್ರಮ ಶಾಲೆಗಳು, ಸ್ವಯಂಸೇವಾ ಸಂಸ್ಥೆಗಳು ಸೋಲಿಗರ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುತ್ತಿವೆ.

**ನ್ಯಾಯ ಪದ್ಧತಿ**

ಯಾವುದೇ ಒಂದು ಸಮಾಜ ಅದು ಆದಿವಾಸಿ ಸಮಾಜವಾಗಿರಲಿ, ಮುಂದುವರಿದ ಸಮಾಜವಾಗಿರಲಿ ಬೆಳೆಯುತ್ತಾ ಹೊದಂತೆ ಅದರ ಮುನ್ನಡೆಗೆ ಬೇಕಾದ ನಿಯಮಾವಳಿಗಳನ್ನು ಸದಸ್ಯನು ತಮಗಾಗಿ ತಮ್ಮ ಕುಟುಂಬದ ಗುಂಪಿನ ಕ್ಷೇಮಕ್ಕಾಗಿ ತಾವೇ ಪಾಲಿಸಬೇಕಾಗುತ್ತದೆ. ಪ್ರತಿಯೊಂದು ಹಾಡಿಗೂ ಒಬ್ಬ ದೊಡ್ಡ ಯಜಮಾನನಿರುತ್ತಾನೆ. ಅವನ ಸಹಾಯಕ್ಕೆ ಕೋಲುಕಾರನೊಬ್ಬನಿರುತ್ತಾನೆ. ಅವನೇ ಎಲ್ಲಾ ವ್ಯವಹಾರವನ್ನು ಬಗೆಹರಿಸುತ್ತಾನೆ. "ಕಟ್ಟೆಮನೆ" ಎಂಬುದು ಇವರ ನ್ಯಾಯಸ್ಥಾನ. ಇಲ್ಲಿ ಮೂರು ಜನ ಯಜಮಾನರಿರುತ್ತಾರೆ. ಅವರೆಂದರೆ ಕುಲದ ಗೌಡ, ನಾಡಗೌಡ ಮತ್ತು ಕಟ್ಟೇಗೌಡ ಇವರು ಕೊಡುವ ತೀರ್ಪೇ ಅಂತಿಮ. ಹೀಗೆ ಕುಲ ಹಿರಿಯರು ಕುಳಿತು ನ್ಯಾಯ ಮಾಡುವ ಪ್ರದೇಶವನ್ನು ಕಟ್ಟೆಮನೆ ಎಂದು ಕರೆಯುತ್ತಾರೆ. ಈಗಲೂ ಅಲ್ಲಲ್ಲಿ ಈ ಬಗೆಯ ಚಾವಡಿಗಳನ್ನು ಕಾಣಬಹುದು. ಈ ಕುಲ ಪಂಚಾಯತಿಗೆ ಯಜಮಾನ ಎಂಬ ಹಿರಿಯನಿರುತ್ತಾನೆ. ಇವನು ಹಾಡಿಯ ಪ್ರಭಾವಶಾಲಿಯಾದ ವ್ಯಕ್ತಿಯಾಗಿರುತ್ತಾನೆ. ಸೋಲಿಗರಲ್ಲಿ ಪಾದರಕ್ಷೆಯಲ್ಲಿ ಹೊಡೆದರೆ ಅದು ದೊಡ್ಡ ತಪ್ಪು. ಹೊಡೆದವನು ದಂಡ ಕೊಡಬೇಕು. ಹೊಡೆಸಿಕೊಂಡವನು ಕುಲಕ್ಕೆ ಊಟ ಕೊಡಬೇಕು. ಈ ರೀತಿಯ ನ್ಯಾಯವ್ಯವಸ್ಥೆ ಇರುವುದರಿಂದಲೇ ಸೋಲಿಗರ ನೀತಿ ನಿಯಮಗಳು ಕಟ್ಟುನಿಟ್ಟಾಗಿ ನಡೆದುಕೊಂಡು ಬರುತ್ತವೆ. ಯಜಮಾನನು ತಪ್ಪು ಮಾಡಿದವನನ್ನು ಶಿಕ್ಷಿಸುವ, ದಂಡವಿಧಿಸುವ ಅಥವಾ ಕುಲದಿಂದ ಹೊರಗೆ ಹಾಕುವ ಅಧಿಕಾರವನ್ನು ಪಡೆದಿರುತ್ತಾನೆ.

**ಉಪಸಂಹಾರ**

ಒಟ್ಟಾರೆಯಾಗಿ ಸೋಲಿಗ ಬುಡಕಟ್ಟು ಸಮುದಾಯದವು ರಾಜ್ಯದ ಪ್ರಮುಖ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದೆ. ಇದರೊಂದಿಗೆ ಈ ಸಮುದಾಯವು ಸಾಂಸ್ಕೃತಿಕವಾಗಿ ಮತ್ತು ಪಾರಂಪರಿಕವಾಗಿ ಅಪಾರ ಜ್ಞಾನ ಕೌಶಲ್ಯವನ್ನು ಹೊಂದಿದೆ. ಆದರೆ ಆಧುನೀಕರಣ, ಜಾಗತೀಕರಣ, ಪಾಶ್ಚಾತ್ಯೀಕರಣ, ನಗರೀಕರಣ ಮುಂತಾದವುಗಳಿಂದ ಅವರ ಅಸ್ಮಿತೆ ಕಣ್ಮರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಸೋಲಿಸ ಸಮುದಾಯದ ಸಾಂಸ್ಕೃತಿ ಮೌಲ್ಯಗಳು ಮತ್ತು ಸಾಂಪ್ರದಾಯಿಕ ಜ್ಞಾನವನ್ನು ಉಳಿಸಿಕೊಳ್ಳುವುದರ ಮೂಲಕ ಅವರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸುವುದು ಅವಶ್ಯಕತೆಯಾಗಿದೆ.

**ಪರಾಮರ್ಶನ ಗ್ರಂಥಗಳು**


- ಬೋರಲಿಂಗಯ್ಯ ಹಿ.ಚಿ. ಮತ್ತು ಪ್ರಭಾಕರ ಎಸ್. (2008). *ಆದಿವಾಸಿ ಆಖ್ಯಾನ: ಸಮುದಾಯಗಳ ಅಧ್ಯಯನಕ್ಕೊಂದು ಆಕಾರ.* ಸಿದ್ಧಾರ್ಥ ಪ್ರಕಾಶನ.

- ಚಂದ್ರು ಕಾಳೇನಹಳ್ಳಿ. (1993). *ಸೋಲಿಗರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡಮಿ.
- ಹನಿಯೂರು ಚಂದ್ರೇಗೌಡ. (2015). *ಬದುಕು ಮತ್ತು ಸಂಸ್ಕೃತಿ.* ಅಭಿಜಿತ ಪ್ರಕಾಶನವ.ಮುತ್ತಯ್ಯ ಎಸ್. ಎಂ (2018). *ಬುಡಕಟ್ಟು ಜ್ಞಾನಪರಂಪರೆ.* ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತು.
- ಮಧು ಗುಂಡ್ಲುಪೇಟೆ. (2002). ಕರ್ನಾಟಕ ಬುಡಕಟ್ಟುಗಳ ಅಭಿವೃದ್ಧಿ. ಅಕ್ಷತ ಪ್ರಕಾಶನ.
- ಮಂಜುನಾಥ, ಬಿ.ಆರ್. (2014). *ಬುಡಕಟ್ಟು ಮಕ್ಕಳ ಶೈಕ್ಷಣಿಕ ಸ್ಥಿತಿ ಗತಿಗಳು ಒಂದು ಮಾನವಶಾಸ್ತ್ರೀಯ ಅಧ್ಯಯನ.* (ಪಿಹೆಚ್.ಡಿ. ಮಹಾಪ್ರಬಂಧ). ಮೈಸೂರು ವಿಶ್ವವಿದ್ಯಾನಿಲಯ.
- ರಾಮಕೃಷ್ಣ, ಆರ್. (2007). *ಕರ್ನಾಟಕದ ಬುಡಕಟ್ಟುಗಳು*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
- ಸುನಂದಮ್ಮ ಎನ್. (2011). *ಮೈಸುರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸೋಲಿಗ ಬಡಕಟ್ಟು ಜನಾಂಗದ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ ಕಾರ್ಯಮಗಳು: ಒಂದು ವಿಮರ್ಶಾತ್ಮಕ ಅಧ್ಯಯನ.* ಅಭಿರುಚಿ ಪ್ರಕಾಶನ.
- Govt of India. (1981). *Censes of India-1981*. Registrar General of India.
- Govt of India. (2011). *Censes of India-2011*. Registrar General of India.